ಅ) ಈವರೆವಿಗೆ ಸಕ್ರಮ ಮಾಡಿರುವ ನೀರಾವರಿ ಪಂಪ್‌ಸೆಟ್‌ಗಳೆಷ್ಟು

ಇ) ಅನಧಿಕೃತ ನೀರಾವರಿ ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸಲು ಸರಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಬಸವರಾಜ್ ಹೆಚ್. ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ಮಾರ್ಚ್ 2002 ರ ಅಂತ್ಯದಲ್ಲಿದ್ದಂತೆ ರಾಜ್ಯದಲ್ಲಿ ಗುರುತಿಸಲಾಗಿದ್ದ ಅನಧಿಕೃತ ನೀರಾವರಿ ಪಂಪ್‌ಸೆಟ್‌ಗಳ ಸಂಖ್ಯೆ ಸುಮಾರು ಒಂದು ಲಕ್ಷಕ್ಕೂ ಹೆಚ್ಚು.

ಆ) ಮೇ 2002 ರವರೆಗೆ ರಾಜ್ಯದಲ್ಲಿ ಸಕ್ರಮಗೊಳಿಸಿದ ನೀರಾವರಿ ಪಂಪ್‌ಸೆಟ್‌ಗಳ ಸಂಖ್ಯೆ 77,828.

ಇ) ರೈತರು ಅನಧಿಕೃತ ನೀರಾವರಿ ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸಿಕೊಳ್ಳಲು 1997 ರಿಂದ ಆಗಿಂದಾಗ್ಗೆ ಅವಕಾಶ ನೀಡುತ್ತಾ ಬಂದಿವೆ.

ವಿದ್ಯುತ್ ಕಳವು ವಿರೋಧಿ ಕಾನೂನು ದಿನಾಂಕ: 10.4.2002 ರಿಂದ ಜಾರಿಗೊಂಡರೂ ಸಹ ದಿನಾಂಕ: 30.6.2002 ರವರೆಗೆ ಅಂತಿಮವಾಗಿ ಐ.ಪಿ. ಸೆಟ್‌ಗಳನ್ನು ಸಕ್ರಮಗೊಳಿಸಿಕೊಳ್ಳಲು ಅವಕಾಶ ನೀಡಲಾಯಿತು. ನಂತರ ಯಾವುದೇ ಯೋಜನೆಯೂ ಸಕ್ರಮವಾಗಿ ಜಾಲ್ತಿಯಿರುವುದಿಲ್ಲ.

ಮಂಡ್ಯ ನಗರ ಮಾಂಸಹಾರಿ ಹೋಟೆಲ್‌ಗಳಲ್ಲಿ ಅನಧಿಕೃತ ಮದ್ಯ ಸರಬರಾಜು

9[illegible] (1330) - ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) : ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ನಗರದಲ್ಲಿ ಮಾಂಸಾಹಾರಿ ಹೋಟೆಲ್‌ಗಳಲ್ಲಿ ಅನಧಿಕೃತವಾಗಿ ಮಾದಕ ಪಾನೀಯ (ಮದ್ಯ) ಸರಬರಾಜು ಮಾಡಲಾಗುತ್ತಿರುವುದನ್ನು ಸರ್ಕಾರವು ಗಮನಿಸಿದೆಯೇ?

ಆ) ಈ ವಿಚಾರವನ್ನು ಇಲಾಖೆಯು ಸಂಬಂಧಪಟ್ಟ ಸ್ಥಳೀಯ ಅಧಿಕಾರಿಗಳ ಗಮನಕ್ಕೆ ತಂದಿದ್ದರೂ, ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಕಾರಣವೇನು?

ಇ) ನಿರ್ಲಕ್ಷ್ಯ ಮನೋಭಾವನೆಯ ಅಧಿಕಾರಿಗಳ ಮೇಲೆ ಸರ್ಕಾರವು ಕ್ರಮ ಕೈಗೊಳ್ಳುವುದೇ?

ಶ್ರೀ ಎಂ. ಎಂ. ನಾಣಯ್ಯ (ಅಬಕಾರಿ ರಾಜ್ಯ ಸಚಿವರು) :

ಅ) ಹೌದು.

ಆ) ಅಬಕಾರಿ ಇಲಾಖೆಯು ಅಕ್ರಮ ಮದ್ಯ ಹೊಂದಿರುವ ಮಾಂಸಾಹಾರಿ ಹೋಟೆಲ್‌ಗಳ ವಿರುದ್ಧ ಕ್ರಮ ಜರುಗಿಸಿ 2001-02ನೇ ಸಾಲಿಗೆ ಮಂಡ್ಯ ಜಿಲ್ಲೆಯಲ್ಲಿ ಒಟ್ಟು 27 ಮೊಕದ್ದಮೆಗಳನ್ನು ಹಾಗೂ ಮಂಡ್ಯ ನಗರದಲ್ಲಿ ಒಂದು ಮೊಕದ್ದಮೆಯನ್ನು ದಾಖಲಿಸಲಾಗಿದೆ.

ಇ) ಉದ್ಭವಿಸುವುದಿಲ್ಲ.

ಕೆ.ಜಿ.ಎಫ್. ಕ್ಷೇತ್ರಕ್ಕೆ ನೀರು ಸರಬರಾಜು

989 (1215) - ಶ್ರೀ ಭಕ್ತವತ್ಸಲಂ ಎಂ. (ಕೆ.ಜಿ.ಎಫ್) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?